# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 03-09-2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(ಶ)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 03-09-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಿಬಿಎಂಪಿ **ಸಂಪರ್ಕ ಕೇಂದ್ರ, 1ನೇ ಮಹಡಿ, ಗುಂಡಪ್ಪ ಪಾರ್ಕ್ ಪಕ್ಕ ಜೋಗುಪಾಳ್ಯ, ಬೆಂಗಳೂರು-8** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತ್ಯಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ ಆಶಾ ಆಲ್ವಿನ್, ಶ್ರೀ. ಹೇಮಂತ್ ನಾಗ್, ಮತ್ತು ಶ್ರೀಮತಿ ವಿಜಯಲಕ್ಷ್ಮೀ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ ಆಶಾ ಆಲ್ವಿನ್ ರವರು ಮಾತನಾಡುತ್ತಾ ಮೊಟ್ಟಪ್ಪನ ಪಾಳ್ಯ 2ನೇ ಕ್ರಾಸ್‌ನಲ್ಲಿ ಬೀದಿ ದೀಪ ಬೆಳ್ಳಿಗೆ 10.00 ಗಂಟೆವರೆಗೂ ಉರಿಯುತ್ತಿದ್ದು ಹಾಗೂ ಕೆಲವೊಂದು ಕಡೆ ಬೀದಿ ದೀಪಗಳು ಉರಿಯುತ್ತಿಲ್ಲದ ಕಾರಣ ದುರಸ್ತಿಗೊಳಸಬೇಕೆಂದು ಹಾಗೂ ಸಮಯಕ್ಕೆ ಸರಿಯಾಗಿ ಬೀದಿ ದೀಪಗಳನ್ನು ಆರಿಸಬೇಕೆಂದು ಹೇಳರುತ್ತಾರೆ. ನೋಡಲ್ ಅಧಿಕಾರಿರವರು ಮಾತನಾಡುತ್ತಾ 7ನೇ ಮುಖ್ಯ ಕ್ರೈಂ ಬ್ರೀಡ್ಜ್ ರಸ್ತೆಯಲ್ಲಿ ಕೆಲವೊಂದು ಕಡೆ ಬೀದಿ ದೀಪಗಳು ಇಲ್ಲದಿರುವುದರಿಂದ ಹೊಸದಾಗಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಬೇಕೆಂದು ಕೇಳರುತ್ತಾರೆ.

   ಕ್ರಮ :- AEE ಬಿಬಿಎಂಪಿ ಹಾಗೂ ವಿದ್ಯುತ್ ರವರು ಕ್ರಮ ವಹಿಸುವುದು.

2) ಸಭೆಯಲ್ಲಿ ಕಂದಾಯ ವಿಭಾಗದವರು ಮತದಾನದ ಗುರುತ್ತಿನ ಚೀಟಿ ಜೊತೆ ಆಧಾರ್ ಜೋಡನೆಯ ಬಗ್ಗೆ ವಿವರವಾಗಿ ತಿಳಿಸಿದರು ಹಾಗೂ ಮತದಾರರ ಪಟ್ಟಿಯಲ್ಲಿ ಹೊಸದಾಗಿ ನೊಂದಣಿ ಮಾಡಿಸುವುದು ಹಾಗೂ ಅಲಿಸುವಿಕೆಯ ಬಗ್ಗೆಯು ಸಹ ವಾರ್ಡಿನ ಸಮಿತಿ ಸದಸ್ಯರು ವಾರ್ಡಿನ್ಲಲಿ ಪ್ರಚಾರ ಪಡಿಸಿ ಈ ಕಾರ್ಯಕ್ರಮವನ್ನು ಯಶ್ವಸಗೊಳಸಬೇಕೆಂದು ನೋಡಲ್ ಅಧಿಕಾರಿರವರು ಕೋರಿದರು.

   ಕ್ರಮ :- ಸಹ ಕಂದಾಯ ಅಧಿಕಾರಿ ರವರು ಕ್ರಮ ವಹಿಸುವುದು.

3) ವಾರ್ಡಿನ ಸಮಿತಿ ಸದಸ್ಯರಾದ ಶ್ರೀಮತಿ ಆಶಾ ಆಲ್ವಿನ್ ರವರು ಮೊಟ್ಟಪ್ಪನ ಪಾಳ್ಯ ಹಾಗೂ ವಾರ್ಡಿನ ಇತರ ಕಡೆ ಕಳ್ಳತನವು ಬಹಳ ಹೆಚ್ಚಾಗಿರುವುದರಿಂದ ಅರಕ್ಷಕ ವಿಭಾಗದವರು ಪೋಲಿಸ್ ಬೀಟನ್ನು ಹೆಚ್ಚಿಸಬೇಕೆಂದು ಕೋರಿರುತ್ತಾರೆ.

4) ವಾರ್ಡಿನ ನಾಗರೀಕರಾದ ಬಿ.ಅಶ್ವಥ್ ನಾರಾಯಣ್ ರವರು ದೂರನ್ನು ನೀಡುತ್ತಾ ಜಿ ನಂ 2ನೇ ಬೀದಿಯಲ್ಲಿ ಮಳೆ ಬಂದಾಗ ಒಳಚರಂಡಿಯ ನೀರು ತುಂಬಿ ರಸ್ತೆಯಲ್ಲಿಯರಿದು ಅಕ್ಕಪಕ್ಕದ ಮನೆಗಳಿಗೆ ಚರಂಡಿಯ ನೀರು ಬರುತ್ತದೆ, ಇದರಿಂದ ವಾಸಿಸುವ ನಾಗರೀಕರಿಗೆ ಸಮಸ್ಯೆಯಾಗುತ್ತಿದ್ದು ದುರಸ್ಥಿಗೊಳಸಬೇಕೆಂದು ಕೇಳಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕರು ಕಾಮಗಾರಿ ಬಿಬಿಎಂಪಿ ರವರು ಕ್ರಮವಹಿಸುವುದು.

5) ವಾರ್ಡಿನಲ್ಲಿರುವ ಮರಗಳ ಕೊಂಬೆಗಳು ರಸ್ತೆಯಲ್ಲಿ ಅಡ್ಡಲಾಗಿ ಇರುವುದನ್ನು ತೆರವುಗೊಳಿಸುವುದು.- ಅರಣ್ಯ ಇಲಾಖೆ ಬಿಬಿಎಂಪಿ ಕ್ರಮವಹಿಸುವುದು.

6) ಸಾಯಿಬಾಬ ದೇವಸ್ಥಾನ 7ನೇ ಮುಖ್ಯ ಬೀದಿಯಿಂದ ರಾಜಕಾಲುವೆಯವರಿಗೆ ಸಂಪರ್ಕಿಸುವ ರಸ್ತೆ ಮಾರಪ್ಪ ಹಾಗೂ ಮುನಿಸ್ವಾಮಪ್ಪ ರಸ್ತೆಯ ಒಳಚರಂಡಿಯ ಹುಲೆತ್ತುವುದು- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು,</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ